# ಮಕ್ಕಳ ಕಥಾ ಸಾಹಿತ್ಯ

**ಉಮಾದೇವಿ ಜಿ. ಟಿ.**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಶ್ರೀಮತಿ ರುದ್ರಾಂಬ ಎಂ ಪಿ ಪ್ರಕಾಶ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೂವಿನಹಡಗಲಿ, ವಿಜಯನಗರ ಜಿಲ್ಲೆ.

**Received: 15/10/2024 ; Acepted: 01/11/2024 ; Published: 30/11/2024**

**DOI: https://doi.org/10.5281/zenodo.14246361**

## ABSTRACT:

ನಮ್ಮ ಕನ್ನಡ ಸಾಹಿತ್ಯಕ್ಕೆ ಸುದೀರ್ಘವಾದ ಇತಿಹಾಸವಿದೆ. ಪೂರ್ವದ ಹಳೆಗನ್ನಡ, ಹಳೆಗನ್ನಡ, ನಡುಗನ್ನಡ, ಹೊಸಗನ್ನಡ, ನವೋದಯ, ಪ್ರಗತಿಶೀಲ, ನವ್ಯ, ದಲಿತ-ಬಂಡಾಯ ಸಾಹಿತ್ಯ ಎಂಬ ಕಾಲಘಟ್ಟದಲ್ಲಿ ಇಂದು ಹೆಮ್ಮರವಾಗಿ ಬೆಳೆದು ನಿಂತಿರುವುದನ್ನು ನಾವು ಕಾಣಬಹುದು. ಇಪ್ಪತ್ತನೆಯ ಶತಮಾನ 'ಅತ್ಯಂತ ವಿಶಿಷ್ಟವಾದ' ಯುಗ ಎಂದು ಪರಿಗಣಿತವಾಗಿದ್ದು, ಈ ಕಾಲಘಟ್ಟದಲ್ಲಿ ಮಹಾಕಾವ್ಯ, ಭಾವಗೀತೆ, ಸಣ್ಣಕಥೆ, ಕಾದಂಬರಿ, ಪ್ರಬಂಧ, ನಾಟಕ, ಪ್ರವಾಸ ಸಾಹಿತ್ಯ, ವಿಚಾರಸಾಹಿತ್ಯ ಆತ್ಮಕಥೆ, ಜೀವನಚರಿತ್ರೆ ಇತ್ಯಾದಿ ಪ್ರಕಾರಗಳೆಲ್ಲವನ್ನು ಮೈಗೂಡಿಸಿಕೊಂಡು ಸಮೃದ್ಧವಾಗಿ ಬೆಳೆಯುತ್ತಿದೆ. ಇವುಗಳಲ್ಲಿ "ಮಕ್ಕಳ ಸಾಹಿತ್ಯ"ವೂ ಒಂದು.

ಕನ್ನಡ ಸಾಹಿತ್ಯದಲ್ಲಿ 'ಮಕ್ಕಳ ಸಾಹಿತ್ಯದ' ಬೇರನ್ನು ಜಾನಪದ ಪರಂಪರೆಯಲ್ಲಿಯೇ ಕಾಣಬಹುದಾದರೂ 'ಮಕ್ಕಳ ಸಾಹಿತ್ಯ' ಎಂಬ ಹೆಸರನ್ನು ಹೊತ್ತು ಪ್ರತ್ಯೇಕ ಸಾಹಿತ್ಯ ಪ್ರಕಾರವಾಗಿ ಬೆಳೆದು ಬಂದದ್ದು 'ನವೋದಯ ಸಾಹಿತ್ಯ'ದ ಕಾಲಘಟ್ಟದಲ್ಲಿ. 'ಮಕ್ಕಳ ಸಾಹಿತ್ಯ ಎಂದರೇನು?' ಮಕ್ಕಳ ಸಾಹಿತ್ಯವನ್ನು ಏಕೆ ಪ್ರತ್ಯೇಕ ಪ್ರಕಾರವಾಗಿ ನೋಡಬೇಕು? ಮಕ್ಕಳ ಸಾಹಿತ್ಯದ ಮಹತ್ವ, ಮಕ್ಕಳ ಸಾಹಿತ್ಯದ ಉಗಮ, ಬೆಳವಣಿಗೆ, ಮಕ್ಕಳ ಸಾಹಿತ್ಯದ ಸ್ವರೂಪ ಈ ಅಂಶಗಳನ್ನು ಆಧರಿಸಿ ಬರೆದ ಲೇಖನ ಇದಾಗಿದೆ.

## KEYWORDS:

ಮಕ್ಕಳ ಕಥೆ, ಮುದ್ರಣ ಯುಗ, ಜಾನಪದ, ಇಪ್ಪತ್ತನೆಯ ಶತಮಾನ, ನವೋದಯ.

ಆಧುನಿಕ ಕಾಲದಲ್ಲಿ ಮುದ್ರಣಯಂತ್ರಗಳು ಬಂದ ಮೇಲೆ ಸಾಹಿತ್ಯ ವಲಯದಲ್ಲಿ ಮಹತ್ತರ ಬದಲಾವಣೆಗಳಾಗಿ ಕನ್ನಡ ಸಾಹಿತ್ಯದ ಇತರ ಎಲ್ಲ ಪ್ರಕಾರಗಳಂತೆ 'ಮಕ್ಕಳ ಸಾಹಿತ್ಯ' ವಿಪುಲವಾಗಿ ಬೆಳೆಯಿತು. ಕನ್ನಡದ ಅನೇಕ ಪ್ರಸಿದ್ಧ ಕವಿಗಳೆಲ್ಲರೂ ಮಕ್ಕಳ ಸಾಹಿತ್ಯವನ್ನು ರಚಿಸಿರುವುದನ್ನು ನಾವು ಕಾಣಬಹುದು. ಅಜ್ಜಿ ಹೇಳುವ ಕಥೆಗಳು, ಲಾಲಿಪದಗಳು, ಪ್ರಾಸಬದ್ಧ ಆಟದ ಪದಗಳು, ಒಗಟುಗಳು, ಕಥೆಗಳು ಅದರಲ್ಲೂ ರಾಜಕುಮಾರ-ರಾಜಕುಮಾರಿಯರ ಕಥೆಗಳು, ಅದ್ಭುತ-ರಮ್ಯ ಕಥೆಗಳು, ಕಾಗಕ್ಕ-ಗುಬ್ಬಕ್ಕನ ಕಥೆ, ಪಂಚತಂತ್ರದ ಕಥೆಗಳು ಇವೆಲ್ಲವೂ ಮಕ್ಕಳನ್ನು ರಂಜಿಸುತ್ತಾ ಬಂದಿವೆ. 'ಮಕ್ಕಳ ಸಾಹಿತ್ಯ ಎಂದರೇನು?' ಮಕ್ಕಳ ಸಾಹಿತ್ಯವನ್ನೇಕೆ ಪ್ರತ್ಯೇಕ ಪ್ರಕಾರವಾಗಿ ನೋಡಬೇಕು? ಮಕ್ಕಳ ಸಾಹಿತ್ಯದ ಮಹತ್ವ, ಮಕ್ಕಳ ಸಾಹಿತ್ಯದ ಉಗಮ, ಬೆಳವಣಿಗೆ, ಮಕ್ಕಳ ಸಾಹಿತ್ಯದ ಸ್ವರೂಪ ಈ ಅಂಶಗಳನ್ನು ಆಧರಿಸಿ ಬರೆದ ಲೇಖನ ಇದಾಗಿದೆ.

ಮೊದಲಿಗೆ 'ಮಕ್ಕಳ ಸಾಹಿತ್ಯ ಎಂದರೇನು?' ಎಂಬುದನ್ನು ತಿಳಿದುಕೊಳ್ಳೋಣ. ಮಕ್ಕಳ ಮನಸ್ಸನ್ನು ಅರಳಿಸಿ, ಕುತೂಹಲವನ್ನು ಕೆರಳಿಸಿ, ಕಲ್ಪನೆಯನ್ನು ಗರಿಗೆದರಿಸಿ, ಭಾವನೆಗಳನ್ನು ಪ್ರಚೋದಿಸಿ, ಆನಂದದ ಕಡಲಲ್ಲಿ ತೇಲುವಂತೆ ಮಾಡಿ, ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವ ಸಾಹಿತ್ಯವೇ 'ಮಕ್ಕಳ ಸಾಹಿತ್ಯ'. ಕನ್ನಡ ಸಾಹಿತ್ಯದಲ್ಲಿ ಮಹಾಕಾವ್ಯ, ಭಾವಗೀತೆ, ಸಣ್ಣಕಥೆ, ನಾಟಕ, ಕಾದಂಬರಿ, ಪ್ರಬಂಧ, ಪ್ರವಾಸ ಸಾಹಿತ್ಯ, ವಿಚಾರ ಸಾಹಿತ್ಯ ಇತ್ಯಾದಿ ಪ್ರಕಾರಗಳಿರುವಂತೆ 'ಮಕ್ಕಳ ಸಾಹಿತ್ಯ'ದಲ್ಲಿಯೂ 'ಮಕ್ಕಳ ಕಥಾ ಸಾಹಿತ್ಯ', 'ಮಕ್ಕಳ ನಾಟಕಗಳು', 'ಮಕ್ಕಳ ಕಾದಂಬರಿಗಳು', 'ಮಕ್ಕಳ ಕವಿತೆಗಳು', 'ಮಕ್ಕಳ ವಿಜ್ಞಾನ ಬರಹಗಳು' ಎಂಬ ಬೇರೆ-ಬೇರೆ ಪ್ರಕಾರಗಳಿವೆ.

'ಮಕ್ಕಳ ಸಾಹಿತ್ಯ' ಅಂದಾಕ್ಷಣ ನಮಗೆ ಮಕ್ಕಳ ಕಥೆಗಳು ನೆನಪಾಗುತ್ತವೆ. 'ಮಕ್ಕಳ ಕಥೆಗಳು ಅಥವಾ ಮಕ್ಕಳ ಕಥಾ ಸಾಹಿತ್ಯ' ಎನ್ನುವುದು ನಮ್ಮ ಕನ್ನಡ ಸಾಹಿತ್ಯದ 'ಸಣ್ಣಕಥೆಗಳು' ಎಂಬ ಪ್ರಕಾರದಿಂದ ಪ್ರತ್ಯೇಕವಾಗಿ ಗಮನಿಸಬೇಕಾದಂತಹ ಸಾಹಿತ್ಯ. ಏಕೆಂದರೆ ಮಕ್ಕಳಿಗೆ ವಿಮರ್ಶೆ ಅರ್ಥವಾಗುವುದಿಲ್ಲ. ಪಾಂಡಿತ್ಯ ಹೆಚ್ಚಿಸಿಕೊಳ್ಳಲು ಮಕ್ಕಳು ಸಾಹಿತ್ಯ ಓದುವುದಿಲ್ಲ. ದೊಡ್ಡ-ದೊಡ್ಡ ಪುಸ್ತಕಗಳನ್ನು ಅವರು ಇಷ್ಟಪಡುವುದಿಲ್ಲ. ಓದಿದ ಕೂಡಲೇ, ಕೇಳಿದ ಕೂಡಲೇ ಅರ್ಥವಾಗುವಂತಹ, ಸರಳವಾದ, ಸಣ್ಣ-ಸಣ್ಣ ಕಥೆಗಳನ್ನು ಬಹಳ ಬೇಗ ಗ್ರಹಿಸುತ್ತಾರೆ. ಆದುದರಿಂದ ಮಕ್ಕಳ ಸಾಹಿತ್ಯವನ್ನು ರಚಿಸುವಾಗ ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡೇ ರಚಿಸಬೇಕಾಗುತ್ತದೆ.

**ಮಕ್ಕಳ ಸಾಹಿತ್ಯದ ಉಗಮ ಮತ್ತು ಬೆಳವಣಿಗೆ:** ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧ ಮತ್ತು ಇಪ್ಪನೆಯ ಶತಮಾನದ ಪೂರ್ವಾರ್ಧವನ್ನು

“ಮಕ್ಕಳ ಸಾಹಿತ್ಯದ ಸುವರ್ಣ ಯುಗ” ಎಂದು ಕರೆಯಲಾಗುತ್ತದೆ. ಏಕೆಂದರೆ ಅನೇಕ ಶ್ರೇಷ್ಠ ಮಕ್ಕಳ ಪುಸ್ತಕಗಳನ್ನು ಆಗ ಪ್ರಕಟಿಸಲಾಯಿತು.

ಜಾನ್ ನ್ಯೂಬೆರೆ ಸಂಗ್ರಹಿಸಿದ 'ಎ ಲಿಟಲ್ ಪ್ರೆಟಿ ಪಾಕೆಟ್ ಬುಕ್' ಆಂಗ್ಲ ಪುಸ್ತಕವು ಮೊದಲ ಆಧುನಿಕ ಮಕ್ಕಳ ಪುಸ್ತಕ ಎಂದು ಪರಿಗಣಿತವಾಗಿದೆ. ಪ್ರೊ. ಗ್ರೆನ್ಬಿ ಬರೆಯುವ ಹಾಗೆ “ನ್ಯೂಬೆರಿ ಅವರು ಮಕ್ಕಳ ಸಾಹಿತ್ಯದ ಪಿತಾಮಹ ಎಂದು ಪ್ರಸಿದ್ಧರಾಗಿದ್ದಾರೆ.” ಮಕ್ಕಳ ಪುಸ್ತಕಗಳ ಗುಣಮಟ್ಟದಲ್ಲಿ ಸುಧಾರಣೆ ಮತ್ತು ಅವರು ಪ್ರಕಟಿಸಿದ ವಿಷಯಗಳ ವೈವಿಧ್ಯತೆಯು ನ್ಯೂಬೆರಿಯನ್ನು ಅವರ ಕಾಲಕ್ಕೆ ಮಕ್ಕಳ ಪುಸ್ತಕಗಳ ಪ್ರಮುಖ ನಿರ್ಮಾಪಕರನ್ನಾಗಿ ಮಾಡಲು ಸಹಾಯ ಮಾಡಿತು.

**ಮಕ್ಕಳ ಸಾಹಿತ್ಯವನ್ನು ಏಕೆ ಓದಬೇಕು?**

- ಮಕ್ಕಳ ಸಾಹಿತ್ಯವು ಹೊಸ ಶಬ್ದಕೋಶವನ್ನು ಪರಿಚಯಿಸುವ ಮೂಲಕ ಭಾಷಾ ಬೆಳವಣಿಗೆಯನ್ನು ಮತ್ತು ಸಂದರ್ಭಕ್ಕೆ ತಕ್ಕಂತೆ ಭಾಷೆಯನ್ನು ಕಲಿಯಲು, ಬಳಸಲು ಸಹಾಯ ಮಾಡುತ್ತದೆ.
- ಓದುವಾಗ ಮಕ್ಕಳು ವಿವಿಧ ಪದಗಳು ಮತ್ತು ವಾಕ್ಯಗಳ ರಚನೆಗೆ ಒಡ್ಡಿಕೊಳ್ಳುತ್ತಾರೆ.
- ಇದಲ್ಲದೆ ಮಕ್ಕಳ ಸಾಹಿತ್ಯದ ಓದು ಮಕ್ಕಳ ಜ್ಞಾಪಕ ಶಕ್ತಿ, ಗಮನ ಮತ್ತು ಕಲ್ಪನೆಯಲ್ಲಿ ಮಕ್ಕಳ ಅರಿವಿನ ಬೆಳವಣಿಗೆಯನ್ನು ಹೆಚ್ಚಿಸುತ್ತದೆ.
- ಮಕ್ಕಳ ಪುಸ್ತಕಗಳು ಸಾಮಾನ್ಯವಾಗಿ ಪ್ರೀತಿ, ಸಹಾನುಭೂತಿ, ಕುಟುಂಬ ವಾತ್ಸಲ್ಯ ಮತ್ತು ಸ್ನೇಹದಂತಹ ಮಕ್ಕಳು ಇಷ್ಟಪಡುವಂತಹ ವಿಷಯಗಳನ್ನು ಪ್ರಸ್ತುತಪಡಿಸುತ್ತವೆ.
- ಮಕ್ಕಳಿಗೆ ಭಾವನೆಗಳನ್ನು ಅರ್ಥ ಮಾಡಿಕೊಳ್ಳಲು ಸಾಹಿತ್ಯದ ಓದು ಸಹಾಯ ಮಾಡುತ್ತದೆ.
- ಓದಿದ್ದನ್ನು ಸಾಮಾಜಿಕ ಸಂದರ್ಭದಲ್ಲಿ ಅನ್ವಯ ಮಾಡಿಕೊಳ್ಳಲು ಸಹಾಯ ಮಾಡುತ್ತದೆ.
- ಭವಿಷ್ಯದ ಸಾಮಾಜಿಕ ಸಂವಹನ ಮತ್ತು ನೈಜ-ಜೀವನದ ಸನ್ನಿವೇಶಗಳಿಗೆ ತಯಾರಾಗಲು ಮಕ್ಕಳ ಸಾಹಿತ್ಯದ ಓದು ಮಕ್ಕಳಿಗೆ ಬೇಕೇ-ಬೇಕು.

ಅಂತಹ ಒಂದು ಓದುವ ವಾತಾವರಣವನ್ನು ಮನೆಯಲ್ಲಿ ಪೋಷಕರು, ಶಾಲೆಗಳಲ್ಲಿ ಶಿಕ್ಷಕರು ಒದಗಿಸಿಕೊಡುವುದು ತುಂಬಾ ಅಗತ್ಯವಾಗಿದೆ.

**ಕನ್ನಡದಲ್ಲಿ ಮಕ್ಕಳ ಕಥಾ ಸಾಹಿತ್ಯ:**

"ಕನ್ನಡ ಮಕ್ಕಳ ಸಾಹಿತ್ಯ" ಯಾವಾಗ ಹುಟ್ಟಿಕೊಂಡಿದೆ ಎಂಬುದನ್ನು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಏಕೆಂದರೆ ಇದರ ಬೇರನ್ನು ಜಾನಪದ ಸಾಹಿತ್ಯದಲ್ಲಿಯೇ ಗುರುತಿಸಬಹುದು. ಪ್ರಾರಂಭದಲ್ಲಿ ಕಿವಿಯ ಮೂಲಕ ಗ್ರಹಿಸುವ 'ಲಾಲಿ ಹಾಡು'ಗಳಿಂದಲೇ ಪ್ರಾರಂಭವಾಗಿರಬಹುದು. ನಂತರ ಕಥೆಗಳಿಂದ ಅದು ಬೆಳೆದಿರಬಹುದು ಎಂಬುದು ವಿದ್ವಾಂಸರ ಅಭಿಪ್ರಾಯ. ಅದು ಹೇಗೆಯೇ ಪ್ರಾರಂಭವಾಗಿರಲಿ ಮಕ್ಕಳಿಗೆ ಅಗತ್ಯವಾದ, ಉಪಯುಕ್ತವಾದ ಸಾಹಿತ್ಯ ಎನ್ನುವುದರಲ್ಲಿ ಅನುಮಾನವೇ ಇಲ್ಲ. ಹಿರಿಯರೂ ಕೂಡ ಇದನ್ನು ಸವಿಯಬಹುದು ಎಂಬುದು ಇದರ ಒಂದು ವಿಶೇಷ.

**ಮಕ್ಕಳ ಸಾಹಿತ್ಯ ಹೇಗಿರಬೇಕು?**

- ಮಕ್ಕಳ ಸಾಹಿತ್ಯ ಮಕ್ಕಳಿಗೆ ನಲಿವು–ತಿಳಿವು ಎರಡನ್ನು ಕೊಡಬೇಕು.
- ಸಂಸ್ಕೃತಿ, ಶಿಕ್ಷಣ, ಕುಟುಂಬ, ಪರಿಸರ ಈ ನಾಲ್ಕೂ ಅಂಶಗಳೂ ಮೇಳೈಸಿರಬೇಕು.
- ಮ್ಕಕಳ ಬೌದ್ಧಿಕ, ಮಾನಸಿಕ, ಸಾಮಾಜಿಕ, ಭಾಷಿಕ ಬೆಳವಣಿಗೆಗೆ ಸಹಾಯಕವಾಗಬೇಕು.

ಮೊದಲಾದ ಅನೇಕ ಅಭಿಪ್ರಾಯಗಳು ಈ ಸಾಹಿತ್ಯದ ಕುರಿತು ವ್ಯಕ್ತವಾಗಿವೆ. ಒಟ್ಟಾರೆ ಮಕ್ಕಳ ಸಾಹಿತ್ಯ ಮಕ್ಕಳಿಗೆ ಸಂತೋಷ ನೀಡಬೇಕು, ಭಾಷೆಗಳನ್ನು ಕಲಿಸಬೇಕು, ಆಲೋಚನಾ ಶಕ್ತಿಯನ್ನು ಬೆಳೆಸಬೇಕು, ಬದುಕುವ ವಿವೇಕವನ್ನು ಹೊಳೆಯಿಸಬೇಕು.

ಜಗತ್ತಿನಲ್ಲೇ ಮಕ್ಕಳ ಪದ್ಯಗಳನ್ನು ಫ್ರಾನ್ಸ್ ದೇಶದ 'ಪೆಕಾಟ್' ಎನ್ನುವಾತ ಮೊದಲು ಪ್ರಕಟಿಸಿದನು ಎಂದು ನಂಬಲಾಗಿದೆ. ಕನ್ನಡದಲ್ಲಿ ಕ್ರಿ.ಶ. 1869 ರಲ್ಲಿ ಹೊರಬಂದ 'ಬಾಲಗೀತೆಗಳು' ಎಂಬ ಕೃತಿ ಮೊದಲ ಕೃತಿ ಎಂದು ಪರಿಗಣಿತವಾಗಿದ್ದರೂ ಅದು ಲಭ್ಯವಿಲ್ಲ. ಅದನ್ನು ಬರೆದವರು ಜಿ.ಮ್ಯಾಕ್ ಎಂಬುವವರು. ನಂತರ ಕೆರೋಡಿ ಸುಬ್ಬರಾಯರು, ಎಸ್. ಜಿ. ನರಸಿಂಹಾಚಾರ್ಯರು ಇಂಗ್ಲೀಷ್ ಭಾಷೆಯಿಂದ ಮಕ್ಕಳಿಗಾಗಿ ಕೆಲವು ಗೀತೆಗಳನ್ನು ಅನುವಾದಿಸಿದರು. ನಂತರ ಜಯರಾಯಾಚಾರ್ಯರು, ಸೋಸಲೆ ಅಯ್ಯಾಶಾಸ್ತ್ರಿಗಳು ಮಕ್ಕಳ ಸಾಹಿತ್ಯದ ಬೆಳೆಗಾಗಿ ಕನ್ನಡದ ನೆಲವನ್ನು ಹದಗೊಳಿಸಿದರು.

ಕನ್ನಡ ಸಾಹಿತ್ಯದಲ್ಲಿ ಪಂಜೆ ಮಂಗೇಶರಾಯ, ಹೊಯ್ಸಳ, ಜೆ.ಪಿ.ರಾಜರತ್ನಂ ಈ ಮೂವರನ್ನು 'ಮಕ್ಕಳ ಸಾಹಿತ್ಯದ ರತ್ನತ್ರಯರು' ಎಂದು ಕರೆಯಬಹುದಾಗಿದೆ. ಕುವೆಂಪು, ಶಿವರಾಮ ಕಾರಂತ, ದಿನಕರ ದೇಸಾಯಿ, ರಾಘವ, ಎಲ್.ಗುಂಡಪ್ಪ, ಮೇವುಂಡಿ ಮಲ್ಲಾರಿ, ಸಿದ್ದಯ್ಯ ಪುರಾಣಿಕ, ತೋನ್ಸೆ ಮಂಗೇಶರಾವ್, ಸಿ.ಫ.

ಕಟ್ಟೀಮನಿ ಮೊದಲಾದವರು ಕವಿತೆಗಳನ್ನು ರಚಿಸಿ ಮಕ್ಕಳನ್ನು ಖುಷಿ ಪಡಿಸಿದ್ದಾರೆ. ನಾರಾಯಣಸ್ವಾಮಿ ಅವರ 'ಪೃಥ್ವೀರಾಜ ಜಯಚಂದ್ರ', 'ಹುಲಿಶಿಕಾರಿ', ಕುವೆಂಪು ಅವರ 'ಮೋಡಣ್ಣನ ತಮ್ಮ', ಶಿವರಾಮ ಕಾರಂತರ 'ಹೊಟ್ಟೆಯಹಾಡು', 'ನಾಲ್ಕನೆಯ ಪಿಶಾಚಿ', ಜೆ.ಪಿ.ರಾಜರತ್ನಂ ಅವರ 'ಬೆಳೆಯುವ ಪೈರು', 'ಧ್ವಜ ವಂದನೆ', ಕೀರ್ತಿನಾಥ ಕುರ್ತಕೋಟಿಯವರ 'ಆಮನಿ', ಕಂಬಾರರ 'ಕಿಟ್ಟೀಕಥೆ', ಪ್ರಸನ್ನ ಅವರ 'ಒಂದಾನೊಂದು ಕಾಡಿನಲ್ಲಿ', ಕೆ.ವಿ. ಸುಬ್ಬಣ್ಣ ಅವರ 'ಬೆಟ್ಟಕ್ಕೆ ಚಳಿಯಾದರೆ', 'ನೀಲಿಕುದುರೆ', ಬಿಳಿಗೆರೆ ಕೃಷ್ಣಮೂರ್ತಿಯವರ 'ಮಳೆಹುಚ್ಚ', 'ನವಿಲೂರಿನ ಕತೆ' ಮೊದಲಾದವು ಮಕ್ಕಳ ನಾಟಕ ಸಾಹಿತ್ಯಕ್ಕೆ ಕೊಡುಗೆಗಳಾಗಿವೆ.

ಮಕ್ಕಳ ಕಾದಂಬರಿ ವಿಭಾಗದಲ್ಲಿ ರಸಿಕ ಪುತ್ತಿಗೆ ಅವರ 'ಕೆಂಪು ಕಾರು', ಹೆಚ್. ಎಸ್. ವೆಂಕಟೇಶಮೂರ್ತಿಯವರ 'ಅಮಾನುಷರು', 'ಅಗ್ನಿಮುಖಿ', ಸುಮತೀಂದ್ರ ನಾಡಿಗರ 'ಸಾಹಸ' ಬಿ.ಎಲ್. ವೇಣು ಅವರ 'ಗುಹೆ ಸೇರಿದವರು' ಎನ್.ವಿ. ಶ್ರೀನಿವಾಸರಾವ್ ಅವರ 'ಹಾರೋ ಹನುಮ', ಆರ್. ವಿ. ಭಂಡಾರಿಯವರ 'ಬಿರುಗಾಳಿ' ಒಂದು ವಿಶಿಷ್ಟ ಕಾದಂಬರಿ, ಜಂಬುನಾಥ ಕಂಚ್ಯಾಣಿ ಅವರ 'ಮಿಡಿದ ಕರುಳು', ಗೀತಾ ಕುಲಕರ್ಣಿಯವರ 'ನೇಜಿ ಗುಬ್ಬಚ್ಚಿ', ರಾಜಶೇಖರ ಭುಸನೂರಮಠ ಅವರ 'ರಾಕ್ಷಸ ದ್ವೀಪ', 'ಅಟ್ಲಾಂಟಿಸ್' ಮೊದಲಾದವುಗಳು ಉತ್ತಮ ಕಾದಂಬರಿಗಳಾಗಿವೆ.

ಕನ್ನಡ ಪತ್ರಿಕೋದ್ಯಮ ಕ್ಷೇತ್ರ ಮಕ್ಕಳ ಸಾಹಿತ್ಯ ಸೃಷ್ಟಿಗೆ ಸಾಕಷ್ಟು ಅವಕಾಶ ಕಲ್ಪಿಸಿಕೊಟ್ಟಿದೆ. ದಿನಪತ್ರಿಕೆ, ವಾರ ಪತ್ರಿಕೆ, ಮಾಸಪತ್ರಿಕೆ ಮೊದಲಾದ ನಿಯತಕಾಲಿಕೆಗಳಲ್ಲಿ ಮಕ್ಕಳ ಸಾಹಿತ್ಯ ಸೃಷ್ಟಿ ಸಾಕಷ್ಟು ನಡೆದಿದೆ. ಕನ್ನಡದಲ್ಲಿ ಮಕ್ಕಳ ಕಾಮಿಕ್ಸ್‌ಗಳಿಗೂ ಬರವಿಲ್ಲ. ಈ ಕ್ಷೇತ್ರದಲ್ಲಿ ಫ್ಯಾಂಟಮ್, ಮೋಗ್ಲಿ, ಮಾಂಡ್ರೇಕ್ ಮೊದಲಾದ ಕಥಾಮಾಲಿಕೆಗಳು ಮಕ್ಕಳನ್ನು ರಂಜಿಸಿವೆ. ಮಕ್ಕಳನ್ನು ದೃಷ್ಟಿಯಲ್ಲಿಟ್ಟು ವಿಶ್ವಕೋಶ ಮಾದರಿಯ ಪರಾಮರ್ಶನ ಗ್ರಂಥಗಳನ್ನು ಸಿದ್ಧಪಡಿಸುವ ಕಾರ್ಯವೂ ಕನ್ನಡದಲ್ಲಿ ಸಾಗಿದೆ. ಒಟ್ಟಾರೆ ಕನ್ನಡದಲ್ಲಿ ಮಕ್ಕಳ ಸಾಹಿತ್ಯ ಸಮೃದ್ಧಿಯಾಗಿ ಬೆಳೆದಿರುವುದನ್ನು ಗಮನಿಸಬಹುದು.

ಇನ್ನು 'ಮಕ್ಕಳ ಸಾಹಿತ್ಯ'ಕ್ಕೆ ಅತಿ ಹೆಚ್ಚಿನ ಕೊಡುಗೆ ಸಂದಿರುವುದು 'ಮಕ್ಕಳ ಕಥಾ ಸಾಹಿತ್ಯ'ದಿಂದ. ಮಕ್ಕಳ ಕಥೆಗಳು ಎಂದಾಕ್ಷಣ ಜನಪದ ರಾಜಕುಮಾರ–ರಾಜಕುಮಾರಿಯರ ಕಥೆಗಳು, ಅದ್ಭುತ ರಮ್ಯ ಕಥೆಗಳು, ಪಂಚತಂತ್ರದ ಕಥೆಗಳು, ಕನ್ನಡದ ಮೊದಲ ಗದ್ಯಕೃತಿ ವಡ್ಡಾರಾಧನೆಯಲ್ಲಿ ಬರುವ ಸಣ್ಣ ಸಣ್ಣ ಉಪಕತೆಗಳು ನೆನಪಾಗುತ್ತವೆ. ನಾ.ಡಿಸೋಜ ಅವರು ಕನ್ನಡದ ಮಕ್ಕಳ ಕಥಾ ಸಾಹಿತ್ಯಕ್ಕೆ ಮಹತ್ವದ ಕೊಡುಗೆಯನ್ನು ನೀಡಿದ್ದು, ಅವರ ಕಥೆಗಳು ಹೀಗಿವೆ: 'ಕಾಸಿಲ್ಲ', 'ನೆನಪೇ–ನೆನಪೇ' 'ಅಂತೆಯೇ ಇರು' 'ಮೂರು ಕೈ', 'ಚಪ್ಪಾಳೆ ತಟ್ಟದ ಕೈಗಳು',

'ಕರಿಮರದ ಕುರ್ಚಿ', 'ಕಾಡುಮರ', 'ಸಂಬಂಧ', 'ಮೇಲು ಪರ್ವತದ ಹೊಸಮನೆ', 'ರಾಷ್ಟ್ರೀಯ ಹೆದ್ದಾರಿ', 'ಡಿವಿಷನ್‌ನಲ್ಲಿ ಸಾವು', 'ಪಿಟೀಲು', ಇವರದ್ದು ಇನ್ನೊಂದು ಕತೆ, ಹಳ್ಳಿಗೆ ನುಗ್ಗಿದ ಹೆಮ್ಮಾರಿ.

ಹೆಚ್. ಎಸ್. ವೆಂಕಟೇಶಮೂರ್ತಿಯವರು ಕನ್ನಡ ಮಕ್ಕಳ ಕಥಾ ಸಾಹಿತ್ಯಕ್ಕೆ ಕೊಡುಗೆ ನೀಡಿದ ಮತ್ತೊಬ್ಬ ಲೇಖಕರಾಗಿದ್ದು, ಅವರ 'ಅಮಾನುಷರು ಮತ್ತು ಇತರೆ ಮಕ್ಕಳ ಕಥೆಗಳು', 'ಸಮಗ್ರ ಮಕ್ಕಳ ಸಾಹಿತ್ಯ'. ಜಂಬುನಾಥ ಕಂಚ್ಯಾಣಿ ಅವರು ಮಕ್ಕಳಿಗಾಗಿ ಹಲವಾರು ರಂಜನೀಯ, ಕೌತುಕಮಯ, ಸಾಹಸ ಪ್ರವೃತ್ತಿಯ ಕಥೆಗಳನ್ನು ಬರೆದಿದ್ದಾರೆ. 'ಸಾಗರದಲ್ಲಿ ಸಾಹಸ ಯಾತ್ರೆ', 'ಕಾಗಿಕೂಟ', 'ಮಣಿಯುಂಗುರ' ಮೊದಲಾದ ಕಥಾಸಂಕಲನಗಳನ್ನು ಇಲ್ಲಿ ಹೆಸರಿಸಬಹುದು. ವಿಜ್ಞಾನದ ಶಿಕ್ಷಕರಾಗಿದ್ದ ಕಂಚ್ಯಾಣಿಯವರು ಹಲವಾರು ವೈಜ್ಞಾನಿಕ ಕಥಾನಕಗಳನ್ನು ಬರೆದಿದ್ದು ಅವೆಲ್ಲವೂ "ಅಂತರಿಕ್ಷದಲ್ಲಿ ಪುಟಾಣಿಗಳು" ಎಂಬ ಸಂಕಲನದಲ್ಲಿ ಸೇರಿವೆ.

**ಕನ್ನಡದ ಮಕ್ಕಳು ಓದಲೇಬೇಕಾದ ಪುಸ್ತಕಗಳು:**

ಮಕ್ಕಳ ಕಥಾ ಸಾಹಿತ್ಯದಲ್ಲೂ ಬೇರೆ-ಬೇರೆ ಪ್ರಕಾರಗಳಿವೆ. ಮಕ್ಕಳ ನೀತಿ ಕಥೆಗಳು, ಮಕ್ಕಳ ಪ್ರಾಣಿ ಕಥೆಗಳು, ಮಕ್ಕಳ ವೈಜ್ಞಾನಿಕ ಕಥೆಗಳು, ಮಕ್ಕಳಿಗಾಗಿ ಬರೆದ ಅತ್ಯದ್ಭುತ ಕಾಲ್ಪನಿಕ ಕಥೆಗಳು, ಮಕ್ಕಳಿಗಾಗಿ ತಮಾಷೆಯ ಸಣ್ಣ ಕಥೆಗಳು, ಮಕ್ಕಳಿಗಾಗಿ ಮಹಾಭಾರತ-ರಾಮಾಯಣದ ಕಥೆಗಳು ಇತ್ಯಾದಿ.

ಪೋಷಕರಾಗಲಿ, ಶಿಕ್ಷಕರಾಗಲಿ ಹೇಳಲೇಬೇಕಾದ ಮಕ್ಕಳ ಕಥೆಗಳನ್ನು ತಿಳಿಯುತ್ತಾ ಹೋಗೋಣ. ಮೊದಲನೆಯದಾಗಿ ನಮ್ಮ ಕನ್ನಡ ಸಾಹಿತ್ಯದ ಮೊದಲ ಗದ್ಯ ಕೃತಿಯಾಗಿದ್ದ 'ವಡ್ಡಾರಾಧನೆ'ಯಲ್ಲಿ ಬರುವ 'ಸುಮತಿಯ ಕಥೆ'ಯ ಬಗ್ಗೆ ತಿಳಿಯೋಣ. ವಡ್ಡಾರಾಧನೆ ಕೃತಿಯಲ್ಲಿ ಬರುವ ಹತ್ತೊಂಬತ್ತು ಕಥೆಗಳಲ್ಲಿ ಮೊದಲನೆಯ ಕಥೆ 'ಸುಕುಮಾರ ಸ್ವಾಮಿಯ ಕಥೆ.' ಈ ಕಥೆಯಲ್ಲಿ ಬರುವ ಒಂದು ಉಪಕಥೆಯೇ 'ಸುಮತಿ' ಎಂಬ ಕಥೆ. ಸುಮತಿ ಎಂಬ ಜಾಣೆಯು ತನ್ನ ತಂದೆಯನ್ನು ಸಂಕಷ್ಟದಿಂದ ಪಾರು ಮಾಡುವ ಕೌಶಲದಿಂದ ಇದು ಮಹತ್ವದ್ದಾಗಿದೆ. ಈ 'ಸುಮತಿ' ಎಂಬ ಕಥೆಯಲ್ಲಿ 'ಸುದಾಮೆ' ಎಂಬ ಮತ್ತೊಂದು ಕಥೆ ಬರುತ್ತದೆ. ಈ ಕಥೆ ಸುದಾಮೆಯ ಸತ್ಯಸಂಧತೆಗೆ ಜನಪ್ರಿಯವಾಗಿದೆ. ಈ 'ಸುಕುಮಾರಸ್ವಾಮಿ' ಎಂಬ ಕಥೆಯಲ್ಲಿ ಬರುವ ಅಗ್ನಿಭೂತಿ-ವಾಯುಭೂತಿ ಪ್ರಸಂಗವನ್ನು ಮಕ್ಕಳಿಗೆ ಓದಿ ತಿಳಿಸಲೇಬೇಕು ಇದು ಹಳಗನ್ನಡ ಭಾಷೆಯಲ್ಲಿದ್ದು, ಸರಳಗನ್ನಡದಲ್ಲಿ ಮಕ್ಕಳಿಗೆ ಈ ಕಥೆಯನ್ನು ಓದಿ ಅರ್ಥೈಸಿ ಹೇಳಬೇಕು.

ಎರಡನೆಯದಾಗಿ 'ದುರ್ಗಸಿಂಹ' ವಿರಚಿತ 'ಕರ್ಣಾಟಕ ಪಂಚತಂತ್ರ' ಎಂಬ ಕೃತಿಯಲ್ಲಿ ಬರುವ ಕಥೆಗಳನ್ನು ಮಕ್ಕಳಿಗೆ ಹೇಳಲೇಬೇಕು.

ರಾಮಾಯಣವು ಭಾರತೀಯ ಮಹಾಕಾವ್ಯಗಳಲ್ಲಿ ಒಂದಾಗಿದ್ದು ಅಲ್ಲಿ ಬರುವ ಪಾತ್ರಗಳು ಮತ್ತು ಘಟನೆಗಳ ಮೂಲಕ ನೈತಿಕ ಮೌಲ್ಯಗಳು ಮತ್ತು ಪಾಠಗಳನ್ನು ನೀಡುವ ಒಂದು ನಿಧಿಯಾಗಿದೆ. ನಮ್ಮ ಮಕ್ಕಳನ್ನು ರಂಜಿಸಲು ಮತ್ತು ಉತ್ತಮ ಮೌಲ್ಯಗಳ ಬಗ್ಗೆ ಅವರಿಗೆ ತಿಳುವಳಿಕೆ ನೀಡಲು ಕೆಲವು ಆಕರ್ಷಕವಾದ ಕಥೆಗಳು ಇಲ್ಲಿವೆ. ಅವುಗಳೆಂದರೆ, 'ಅಳಿಲಿನ ಕಥೆ', 'ರಣಹದ್ದುಗಳ ರಾಜ ಜಟಾಯುವಿನ ಕಥೆ', 'ರಾಮನ ಭಕ್ತ ಕಾಗೆ', 'ಅಚಲ ಭಕ್ತಿಯ ಪಾಠ', 'ಲಕ್ಷ್ಮಣ ರೇಖಾ', 'ಮಂಡೋದರಿ ಮತ್ತು ಸೀತೆಯ ಕಥೆ', 'ಹನುಮಂತನ ಜನ್ಮದ ಕಥೆ', 'ಶೂರ್ಪನಕಿಯ ಕಥೆ', 'ರಾಮನ ಸಾವಿನ ಕಥೆ' ಇತ್ಯಾದಿ.

ಮಹಾಭಾರತದ ಕಥೆಗಳು: 'ದಾನಶೂರ ಕರ್ಣ', 'ದುರ್ಯೋಧನನ ಕಥೆ', 'ಕೃಷ್ಣನಿಗೆ ದ್ರೌಪದಿಯ ಕರೆ', 'ಸಂಕಷ್ಟದ ಸಮಯದಲ್ಲಿ ಪವಿತ್ರ ನಾಮದ ಶಕ್ತಿ', 'ಕೃಷ್ಣನ ದೈವಿಕ ರಕ್ಷಣೆ', 'ಅರ್ಜುನ', 'ಕರ್ಣ ಮತ್ತು ಚಿನ್ನದ ಪರ್ವತಗಳ ಕಥೆ', 'ಬಕಾಸುರನ ಕಥೆ', 'ಏಕಲವ್ಯನ ಕಥೆ', 'ಅಭಿಮನ್ಯುವಿನ ಕಥೆ', 'ಉತ್ತರ ಕುಮಾರನ ಕಥೆ', 'ಬೃಹನ್ನಳೆಯ ಕಥೆ', 'ದ್ರೌಪದಿಯ ವಸ್ತ್ರಾಪಹರಣ' ಹೀಗೆ ಹೇಳುತ್ತಾ ಹೊರಟರೆ ಕೊನೆಯಾಗುವುದಿಲ್ಲ ಏಕೆಂದರೆ ಈ ಜಗತ್ತಿನಲ್ಲಿ ಇರುವುದೆಲ್ಲವೂ ಮಹಾಭಾರತದಲ್ಲಿದೆ.

**ಪೌರಾಣಿಕ ಕಥೆಗಳು:**

ಮಕ್ಕಳಿಗಾಗಿ ಭಾರತೀಯ ಪೌರಾಣಿಕ ಕಥೆಗಳು ಜ್ಞಾನವನ್ನು ಪಡೆಯಲು ಮತ್ತು ಪ್ರಾಚೀನ ಕಾಲದ ಬಗ್ಗೆ ತಿಳಿದುಕೊಳ್ಳಲು ಉತ್ತಮ ಮಾರ್ಗವಾಗಿದೆ. ಇವುಗಳು ಜೀವನದಲ್ಲಿ ಸಕಾರಾತ್ಮಕ ಬದಲಾವಣೆಯನ್ನು ತರಲು ಮಕ್ಕಳಿಗೆ ಪ್ರಮುಖ ಮೌಲ್ಯಗಳು ಮತ್ತು ನೈತಿಕತೆಯನ್ನು ಕಲಿಸುತ್ತವೆ. ಸಾಹಸ ಮತ್ತು ನೈತಿಕ ಸವಾಲುಗಳಿಂದ ಸಮೃದ್ಧವಾಗಿರುವ ಈ ಕಥೆಗಳು ವಿಮರ್ಶಾತ್ಮಕ ಚಿಂತನೆಯನ್ನು ಪ್ರೋತ್ಸಾಹಿಸುತ್ತವೆ. ಈ ಪೌರಾಣಿಕ ಕಥೆಗಳಲ್ಲಿ ಮಕ್ಕಳಿಗೆ ಹೇಳಲೇಬೇಕಾದ ಕಥೆಗಳೆಂದರೆ: 'ನಚಿಕೇತನ ಕಥೆ', 'ಧ್ರುವಕುಮಾರನ ಕಥೆ', 'ಸತ್ಯಹರಿಶ್ಚಂದ್ರನ ಕಥೆ', 'ಭಕ್ತ ಪ್ರಹ್ಲಾದನ ಕಥೆ', 'ಶ್ರವಣಕುಮಾರನ ಕಥೆ', 'ಅರ್ಜುನನ ಏಕಾಗ್ರತೆ', 'ವಿಭೀಷಣನ ಭಕ್ತಿ', 'ನಳನ ಕಥೆ', 'ಕರ್ಣನ ಔದಾರ್ಯ', 'ಗೋವರ್ಧನ ಬೆಟ್ಟದ ಕಥೆ', 'ಮಂಡೋದರಿಯ ತಾಳ್ಮೆ', 'ಮಂಥರೆಯ ಕಥೆ', 'ಸಮುದ್ರ ಮಂಥನ', 'ದಶಾವತಾರ', 'ಉಲೂಚಿಯ ಕಥೆ', ಇತ್ಯಾದಿ.

**ವೈಜ್ಞಾನಿಕ ಕಥೆಗಳು:**

ಈ ಕ್ಷೇತ್ರದಲ್ಲಿ ಹೊಸ ಬೆಳವಣಿಗೆಗಳು ಜನಸಾಮಾನ್ಯರಿಗೆ ತಲುಪುವಂತಾಗಲು 'ಹ.ಶಿ. ಭೈರನಟ್ಟಿ' ಅವರು ಹೊಸ ಆವಿಷ್ಕಾರಗಳನ್ನು ಕಥೆಯ ರೂಪದಲ್ಲಿ ವಿವರಿಸಲು ಯತ್ನಿಸಿದ್ದಾರೆ. ಅವರ 'ವೈವಿಧ್ಯಮಯ ವೈಜ್ಞಾನಿಕ ಕಥೆಗಳು' ಎಂಬ ಕಥಾಸಂಕಲನವು ಒಂದು ಮಹತ್ವದ ವೈಜ್ಞಾನಿಕ ಕಥಾ ಸಂಕಲನವಾಗಿದ್ದು ಇದರಲ್ಲಿನ ಕಥೆಗಳನ್ನು

ಮಕ್ಕಳಿಗೆ ತಿಳಿಸಿಕೊಡಬೇಕು. ಕಥೆಗಳಿಗೆ ವೈಜ್ಞಾನಿಕ ರೂಪ ನೀಡಿರುವುದು ಈ ಕೃತಿಯ ವಿಶೇಷತೆ.

**ರಸ್ಕಿನ್ ಬಾಂಡ್ ಮತ್ತು ಮಕ್ಕಳ ಸಾಹಿತ್ಯ:**

ರಸ್ಕಿನ್ ಬಾಂಡ್ ಬ್ರಿಟಿಷ್ ಮೂಲದ ಭಾರತೀಯ ಲೇಖಕ. ವಿದೇಶದಿಂದ ಭಾರತಕ್ಕೆ ಬಂದು, ಭಾರತದಲ್ಲಿ ನೆಲೆ ನಿಂತು ಭಾರತೀಯತೆಯ ಕುರಿತು ಬರೆದ ಇಂಗ್ಲೀಷನ ಮಹತ್ವದ ಲೇಖಕ. ಭಾರತದ ಪ್ರತಿಯೊಂದು ಮಗುವು ರಸ್ಕಿನ್ ಬಾಂಡ್ ಬರೆದ ಕಥೆಗಳನ್ನು ಓದಲೇಬೇಕು. ಏಕೆಂದರೆ ಅವರ ಕಥೆಗಳು ಹಳ್ಳಿಗಾಡಿನ ಸರಳ ಸಿಹಿಯಾದ ಅನುಭವವನ್ನು ಕೊಡುತ್ತವೆ. ಪ್ರಕೃತಿಯ ಸಂರಕ್ಷಣೆ ಮತ್ತು ಸಸ್ಯ ಹಾಗೂ ಪ್ರಾಣಿಗಳ ಪ್ರಾಮುಖ್ಯತೆಯಂತಹ ವಿಷಯಗಳನ್ನು ಅವರ ಕಥೆಗಳು ತಿಳಿಸಿಕೊಡುತ್ತವೆ.

**ಆರ್. ಕೆ. ನಾರಾಯಣ್ ಮತ್ತು ಮಕ್ಕಳ ಕಥೆಗಳು:**

ರಾಶಿಪುರಂ ಕೃಷ್ಣಸ್ವಾಮಿ ನಾರಾಯಣ್ ಭಾರತದ ಪ್ರಸಿದ್ಧ ಕಾದಂಬರಿಕಾರರಲ್ಲಿ ಒಬ್ಬರು. ಆಂಗ್ಲ ಭಾಷೆಯಲ್ಲಿ ಇವರು ಬರೆದ ಕಾದಂಬರಿಗಳು ಪಾತ್ರಗಳ ನೈಜತೆ, ಸರಳತೆ, ಮೃದು ಹಾಸ್ಯಕ್ಕೆ ಹೆಸರಾಗಿವೆ. ನಾರಾಯಣ್ ಅವರ ಮೊದಲ ಕಥಾಸಂಕಲನ ಮಾಲ್ಗುಡಿ ಡೇಸ್, ಇದರಲ್ಲಿ ಹತ್ತೊಂಬತ್ತು ಕಥೆಗಳಿವೆ.

ಆರ್. ಕೆ. ನಾರಾಯಣ್ ಅವರ ಮೂರನೆಯ ಕಥಾ ಸಂಕಲನ 'ಒಂದು ಕುದುರೆ ಮತ್ತು ಎರಡು ಆಡುಗಳು ಮತ್ತು ಇತರೆ ಕಥೆಗಳು'. ನಾರಾಯಣ್ ಅವರ ನಾಲ್ಕನೆಯ ಕಥಾ ಸಂಕಲನ 'ಆಲದ ಮರದ ಕೆಳಗೆ ಮತ್ತು ಇತರ ಕಥೆಗಳು' ಇದು ಇಪ್ಪತ್ತೆಂಟು ಕಥೆಗಳ ಅದ್ಭುತವಾದ ಸಂಗ್ರಹ.

ಹೀಗೆ ಮಕ್ಕಳ ಕಥಾ ಸಾಹಿತ್ಯ ಎಂಬ ನನ್ನ ಈ ಲೇಖನವು ಕನ್ನಡ ಸಾಹಿತ್ಯ, ಮಕ್ಕಳ ಸಾಹಿತ್ಯ, ಮಕ್ಕಳ ಕಥಾ ಸಾಹಿತ್ಯ, ಮಕ್ಕಳ ಸಾಹಿತ್ಯ ಹೇಗಿರಬೇಕು? ಮಕ್ಕಳ ಸಾಹಿತ್ಯವನ್ನು ಏಕೆ ಓದಬೇಕು? ಮಕ್ಕಳ ಪಾಶ್ಚಾತ್ಯ ಕಥಾ ಸಾಹಿತ್ಯ, ಭಾರತೀಯ ಕಥಾ ಸಾಹಿತ್ಯ, ಕನ್ನಡದ ಮಕ್ಕಳ ಕಥಾ ಸಾಹಿತ್ಯ ಎಂಬ ನೆಲೆಗಳನ್ನು ಆಧಾರವಾಗಿಟ್ಟುಕೊಂಡು ಬರೆದ ಒಂದು ಲೇಖನವಾಗಿದ್ದು, ಮಕ್ಕಳ ಕಥಾ ಸಾಹಿತ್ಯದ ಮೇಲೆ ಬೆಳಕು ಚೆಲ್ಲುವಂತಹ ಒಂದು ಸಣ್ಣ ಪ್ರಯತ್ನವಾಗಿದೆ.

## ಪರಾಮರ್ಶನ ಗ್ರಂಥಗಳು:


1. ರಘುನಾಥ್ ಎನ್. ಎಸ್. (2020). ಶತಮಾನದ ಮಕ್ಕಳ ಸಾಹಿತ್ಯ. ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು.
2. ಕನ್ನಡ ಅಧ್ಯಯನ ಸಂಸ್ಥೆ. (2012). ಕನ್ನಡ ವಿಶ್ವಕೋಶ ಸಂಪುಟ: ಮೂರು. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು.
3. ಮಾದು ಪ್ರಸಾದ ಹುಣಸೂರು. (2020). ಮಕ್ಕಳ ಕಥಾ ಸಾಹಿತ್ಯ: ಸ್ವರೂಪ ಮತ್ತು ತಾತ್ವಿಕತೆ. ಪ್ರೇಮ ಪ್ರಕಾಶನ. ಹುಣಸೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.